UASB Library
Newspaper Clippings
Wednesday 06-04-2022 Pg .1
Jai Kisan

ಪೆನೇಷಿಯಾ-2022ಗೆ ದಿನಗಣನೆ | ಜಿಕೆವಿಕೆಯಲ್ಲಿ ಮೇ 6ರಿಂದ 8ರವರೆಗೆ ಆಯೋಜನೆ

ನೈಸರ್ಗಿಕ, ಸಾವಯವ ಉತ್ಪನ್ನಗಳ ಮೇಳ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನೋತ್ತರ ವ್ಯಾಪಾರ ಕ್ಷೇತ್ರದಲ್ಲಿ ಸುಸ್ಥಿರತೆ ಮರಳಿ ತರಲು, ಆದಾಯ ವೃದ್ಧಿಗೆ ಉತ್ತೇಜಿಸಲು ಉದ್ದೇಶಿತ ಮಹತ್ವದ ನೈಸರ್ಗಿಕ, ಸಾವಯವ ಉತ್ಪನ್ನಗಳ ಮೇಳಕ್ಕೆ ದಿನಗಣನೆ ಶುರುವಾಗಿದೆ.

ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಪೆನೇಷಿಯಾ-2022' ಹತ್ತನೇ ಆವೃತ್ತಿಯ ಮೇಳವು ಮೇ 6ರಿಂದ 8ರವರೆಗೆ ನಡೆಯಲಿದೆ. ದಕ್ಷಿಣ ಏಷ್ಯಾದ ನೈಸರ್ಗಿಕ ಪದಾರ್ಥಗಳ ಸಾವಯವ ಮತ್ತು ಆರೋಗ್ಯ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆ ಒದಗಿಸುವಲ್ಲಿ ಪೆನೇಷಿಯಾ ಫಲಪ್ರದವಾಗಿದ್ದು, ಕಳೆದ ಎರಡು ದಶಕಗಳಲ್ಲಿ ಪ್ರಧಾನ ವೇದಿಕೆಯಾಗಿ ಮಾರ್ಪಟ್ಟಿದೆ.

ದಕ್ಷಿಣ ಏಷ್ಯಾದ ಉತ್ಪನ್ನಗಳಿಗೆ ವಿಶೇಷ ಮಾರುಕಟ್ಟೆ, ಹಿಂದೆಂದೂ ಕಂಡರಿಯದ ವಹಿವಾಟು ಅವಕಾಶಗಳನ್ನು ಕಲ್ಪಿಸಲು ಉತ್ಸುಕವಾಗಿದೆ. ಹೊಸ ನೈಸರ್ಗಿಕ ಮತ್ತು ಸಾವಯವ ಉತ್ಪನ್ನಗಳಿಗೆ ಸರಿಸಾಟಿಯಿಲ್ಲದ ವ್ಯಾಪಾರ ಕುದುರಿಸಲು ಹಾಗೂ ಸೇವೆ ಒದಗಿಸುವುದಕ್ಕೆ ಪೆನೇಷಿಯಾ ಹತ್ತನೇ ಆವೃತ್ತಿ ಪ್ರಮುಖ ವೇದಿಕೆಯಾಗಲಿದೆ ಎಂಬ ವಿಶ್ವಾಸ ಹೊಂದಿದೆ.

ತರಹೇವಾರಿ ಪ್ರದರ್ಶನ

ದೇಶದ ಅತಿದೊಡ್ಡ ನೈಸರ್ಗಿಕ ಉತ್ಪನ್ನಮೇಳವಾಗಿರುವ ಪೆನೇಷಿಯಾದಲ್ಲಿ ಹಲವು ವಿಭಾಗಗಳಿದ್ದು, ಸಾವಯವ, ನೈಸರ್ಗಿಕ ಉತ್ಪನ್ನಗಳ ವಹಿವಾಟಿಗೆ ಶ್ರೇಷ್ಠ ಸಂಪರ್ಕ ಕೊಂಡಿಯಾಗಿದೆ.

■ **ಕೃಷಿ ಉತ್ಪನ್ನಗಳು:** ಆಹಾರಧಾನ್ಯ, ಸಿರಿಧಾನ್ಯ, ದ್ವಿದಳಧಾನ್ಯ, ಬೇಳೆಕಾಳು, ಸಾಂಬಾರು ಪದಾರ್ಥ, ಬೆಲ್ಲ ಇತರ ಸಹಿ ಪದಾರ್ಥಗಳು, ಪಶು ಪೌಷ್ಟಿಕ ಆಹಾರ, ಸಾಗರ ಉತ್ಪನ್ನಗಳು, ಜಾನುವಾರು, ಯಂತ್ರೋಪಕರಣಗಳು.

■ **ಆಹಾರ ಮತ್ತು ಪಾನೀಯ:** ನೈಸರ್ಗಿಕ, ಸಾವಯವ ಆಹಾರಗಳು, ಆಹಾರ ಪದಾರ್ಥಗಳು, ಪೌಷ್ಟಿಕ ಪಾನೀಯಗಳು ಇತ್ಯಾದಿ. ಇದಲ್ಲದೇ ಆರೋಗ್ಯ ಮತ್ತು ಪೌಷ್ಟಿಕ, ವ್ಯಕ್ತಿಗತ ಕಾಳಜಿ, ಪರಿಸರ ಸ್ನೇಹಿ ಉತ್ಪನ್ನಗಳ ವಿಭಾಗಗಳಿರಲಿವೆ.

■ **ಆರೋಗ್ಯ ಮತ್ತು ಪೌಷ್ಟಿಕ:** ಗಿಡಮೂಲಿಕೆಗಳ ಸಾರ, ಕಚ್ಚಾ ಗಿಡಮೂಲಿಕೆಗಳು, ಪೂರಕ ಸಾತ್ವಿಕ ಆಹಾರ ಪದಾರ್ಥಗಳು, ತೈಲರಾಳ ಇತ್ಯಾದಿ

■ **ವೈಯಕ್ತಿಕ ಆರೈಕೆ:** ಸೌಂದರ್ಯವರ್ಧಕಗಳು, ಪೌಷ್ಟಿಕ ಹಾಗೂ ಗಿಡಮೂಲಿಕೆ ಆಧಾರಿತ ಪ್ರಸಾದನ, ನೈಸರ್ಗಿಕ ಸಾಬೂನುಗಳು, ಇತರ ಸ್ನಾನದ ಉತ್ಪನ್ನಗಳು, ತ್ವಚೆ ಮತ್ತು ಕೂದಲಿನ ಆರೈಕೆ, ಮಸಾಜ್ ಪದಾರ್ಥಗಳು, ಸುಗಂಧ ದ್ರವ್ಯಗಳು.

ವಿಪುಲ ವಹಿವಾಟು ಅವಕಾಶ

ಶಿಷಿಡೊ ಕಮ್ಯುನಿ ಕೇಷನ್ಸ್ 2002ರಿಂದ ಪ್ರತಿ ಎರಡು ವರ್ಷಗಳಿಗೊಮ್ಮೆ ಸಂಘಟಿಸುವ ಪ್ರತಿಷ್ಠಿತ, ಮಹತ್ವದ ಮೇಳವು ಸಾವಯವ ಆಹಾರ ಪದಾರ್ಥ ಮತ್ತು ನೈಸರ್ಗಿಕ ಉತ್ಪನ್ನಗಳು ಮಾತ್ರವಲ್ಲ, ಸಹಜ ಮತ್ತು ಆರೋಗ್ಯ ಪೂರ್ಣ ಜೀವನದ ಜಾಗೃತಿ ಮೂಡಿಸುತ್ತಿದೆ. ಕಳೆದ ಎರಡು ದಶಕಗಳಿಂದ ಎಲ್ಲ ಬಗೆಯ ನೈಸರ್ಗಿಕ ಉತ್ಪಾದಿಸುವ ಸಣ್ಣ ಮತ್ತು ಮಧ್ಯಮ ಗಾತ್ರದ ಕಂಪನಿಗಳು, ರೈತರ ಸಹಕಾರ ಸಂಘ-ಸಂಸ್ಥೆಗಳು, ಎಫ್‌ಪಿಒ, ಬುಡಕಟ್ಟು, ಸ್ವಸಹಾಯ ಗುಂಪುಗಳು, ಉದ್ಯಮ- ವ್ಯವಹಾರ ಕ್ಷೇತ್ರಕ್ಕೆ ಪೆನೇಷಿಯಾ ಏಕೈಕ ಪ್ರಧಾನ ವೇದಿಕೆಯಾಗಿದ್ದು, ವಿಪುಲ ವಹಿವಾಟು ಅವಕಾಶಗಳನ್ನು ಒದಗಿಸುವ ಮೂಲಕ ಬಲತುಂಬಿದೆ.

ಮಳಿಗೆ ಕಾದಿರಿಸಲು ಸಂಪರ್ಕಿಸಿ

ಮಳಿಗೆ ಕಾದಿರಿಸಲು, ಸಂದರ್ಶಕರ ನೋಂದಣಿಗೆ ದೂ: 98195 12127, 98693 33310, 88505 28191 ಸಂಪರ್ಕಿಸಿ. ಇ-ಮೇಲ್: seishidocommunications@gmail.com

06-04-2022 Vv Pg 5A

06-04-2022 Hd Pg 05

ಏಳು ವರ್ಷದಲ್ಲಿಯೇ ಗರಿಷ್ಠ ಬೆಲೆ | ಚೀಲವೊಂದಕ್ಕೆ 12,000 ರೂ. | ಗ್ರಾಹಕನ ಕೈ ಸುಡಲಿದೆ ದರ

ನಿಂಬೆ ನಂಬಿ ಬೆಳೆದವರಿಗೆ ಲಾಭ


• ಪರಶುರಾಮ ಶಿವಶರಣ

ವಿಜಯಪುರ: ದಿನದಿಂದ ದಿನಕ್ಕೆ ಬೇಸಿಗೆ ಝಳ ಹೆಚ್ಚಾಗುತ್ತಿದೆ. ಜನರು ತಮ್ಮ ದಾಹ ತಣಿಸಿಕೊಳ್ಳಲು ತಂಪು ಪಾನಿಯಾಗೆ ಮೊರೆ ಹೋಗುತ್ತಿದ್ದಾರೆ.

ದಾಹ ತಣಿಸಲು ಜನ ಬಹುಬೇಗ ನಿಂಬೆ ಪಾನೀಯವನ್ನು ಇಷ್ಟಪಡುವರು. ಈ ಕಾರಣದಿಂದಾಗಿ ಈ ಬಾರಿ ನಿಂಬೆ ಬೆಳೆದ ರೈತರು ಈ ಸಲ ಹೆಚ್ಚು ಲಾಭ ಕಾಣುವ ಸಾಧ್ಯತೆಗಳಿವೆ. ಕಳೆದ ಏಳು ವರ್ಷದಲ್ಲಿಯೇ ಗರಿಷ್ಠ ಬೆಲೆಗೆ ಮಾರಾಟ ವಾಗುತ್ತಿದೆ. ಈ ಬೇಸಿಗೆಯಲ್ಲಿ ನಿಂಬೆ ಬೆಳೆ ದವರ ಪಾಲಿಗೆ ಸಿಹಿಯಾಗಿದೆ.

ಆದರೆ, ನಿಂಬೆ ಬೆಳೆದ ಬೆಳೆಗಾರರಿಗೆ ಹೆಚ್ಚು ಲಾಭವಾಗಿದೆ ಎಂಬುದು ಸತ್ಯ, ಆದರೆ, ಬಿಸಿಲ ದಾಹ ನೀಗಿಸಿಕೊಳ್ಳುವ ಗ್ರಾಹಕರಿಗೆ ಬೆಲೆ ಯೇರಿಕೆಯಿಂದಾಗಿ ಹುಳಿಯಾಗಿದೆ. ಸಭೆ ಸಮಾ ರಂಭಗಳಿಗೆ ಅನಿವಾರ್ಯವಾಗಿ ಬೇಕಾಗಿರುವ ನಿಂಬೆ ಹಣ್ಣನ್ನೂ ಕೊಳ್ಳಲು ಬರುವವರಿಗೆ ಬೆಲೆ ಕೈಸುಡುತ್ತಿದೆ. ಇದೇ ವೇಳೆ ದಾಖಲೆ ಬೆಲೆ ಸಿಗು ತ್ತಿರುವುದರಿಂದ ಬೆಳೆಗಾರರು ಖುಷಿಯಾಗಿದ್ದಾರೆ.

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ನಿಂಬೆ ಹಣ್ಣನ್ನು ವಿವಿಧ ಕಾರಣದಿಂದಾಗಿ ಜನ ಕೊಂಡುಕೊಳ್ಳುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಹಣ್ಣಿನ ದರ ಹೆಚ್ಚಳವಾಗಿದ್ದರೂ ಕೂಡ ಗ್ರಾಹಕರು ಅನಿವಾರ್ಯವಾಗಿ ಕೊಂಡುಕೊಳ್ಳಬೇಕಾಗಿದೆ. ಬೆಳೆ ಗಾರರು, ಗ್ರಾಹಕರ ನಡುವೆ ಮಧ್ಯವರ್ತಿ ಗೂ ಕೂಡ ಹೆಚ್ಚು ಲಾಭದಾಯಕವಾಗಿದೆ ಈ ನಿಂಬೆ ಎಂಬುದರಲ್ಲಿ ಅನುಮಾನವಿಲ್ಲ.



ಹವಾಮಾನ ವೈಪರೀತ್ಯದಿಂದ ಪ್ರಸಕ್ತ ವರ್ಷ ನಿಂಬೆ ಇಳುವರಿ ಕುಂಠಿತಗೊಂಡಿದ್ದರೂ, ನಿಂಬೆ ಹಣ್ಣಿಗೆ ಹೆಚ್ಚಿನ ಬೆಲೆ ಬಂದಿದೆ. ಇದರಿಂದ ನಿಂಬೆ ಬೆಳೆಗಾರರಿಗೆ ಒಂದೆಡೆ ಸಂತೋಷವಾದರೆ, ನಿಂಬೆ ಗಿಡಗಳಿಗೆ ಹೊಂದಿಕೊಂಡಂತೆ ಕಾಯಿ ಇಲ್ಲದಿರುವುದು ನೋವು ಮೂಡಿಸಿದೆ.

■ ಅಶೋಕ ಅಲ್ಲಾಪುರ, ಅಧ್ಯಕ್ಷರು, ಲಿಂಬೆ ನಿಗಮ

ಚೀಲವೊಂದಕ್ಕೆ 12,000 ರೂ.

ನಿಂಬೆ ಚೀಲವೊಂದಕ್ಕೆ ಬರೋಬ್ಬರಿ 12,000 ರೂ.ಗೆ ಮಾರಾಟವಾಗಿರುವುದು ಪ್ರಸಕ್ತ ಮಾರುಕಟ್ಟೆಯಲ್ಲಿ ದಾಖಲೆಯಾಗಿದೆ. ಸದ್ಯ ನಿಂಬೆಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಬಂದಿದೆ. ಗುಣಮಟ್ಟಕ್ಕೆ ತಕ್ಕಂತೆ ನಿಂಬೆ ಹಣ್ಣು ಮಾರಾಟವಾಗುತ್ತಿದೆ. ಕನಿಷ್ಠ 3000 ರೂ. ನಿಂದ ಉತ್ತಮ ಗುಣಮಟ್ಟದ ನಿಂಬೆಗೆ 12,000 ರೂ. ಧಾರಣೆ ಲಭಿಸುತ್ತಿದೆ. ಮಧ್ಯಮ ಗುಣಮಟ್ಟದ ನಿಂಬೆ ಹಣ್ಣು 6000, 7000 ಹಾಗೂ 10,000 ರೂ.ಗೆ ಮಾರಾಟವಾಗುತ್ತಿದೆ.

ಗುಜರಾತ್‌ನಲ್ಲಿ ಕಿಲೋಗೆ 180 ರೂ.

ನಿಂಬೆ ಹಣ್ಣು ಗುಜರಾತ್‌ನಲ್ಲಿ ಕಿಲೋಗೆ 180 ರೂ.ಗೆ ಮಾರಾಟ ವಾದರೆ, ದೆಹಲಿಯಲ್ಲಿ 160 ರೂ.ಗೆ ಮಾರಾಟವಾಗಿದೆ. ಗುಜರಾತ್ ಹಾಗೂ ದೆಹಲಿಯ ಮಾರುಕಟ್ಟೆಯಲ್ಲಿ ನಿಂಬೆ ಕೊರತೆ ಉಂಟಾಗಿರುವುದರಿಂದ ಬೆಲೆ ಹೆಚ್ಚಳಗೊಂಡಿದೆ ಎಂದು ನಿಂಬೆ ವ್ಯಾಪಾರಸ್ಥರು ತಿಳಿಸಿದ್ದಾರೆ. ಪ್ರಸಕ್ತ ವರ್ಷ ಹವಾಮಾನ ವೈಪರೀತ್ಯದಿಂದ ನಿಂಬೆ ಇಳುವರಿ ಕುಸಿತ ಕಂಡಿದೆ. ನಿಂಬೆ ಹಣ್ಣಿನ ಧಾರಣೆ ಹೆಚ್ಚಳಗೊಂಡಿದೆ. ಮಾರ್ಚ್ ಅಂತ್ಯದ ವರೆಗೂ ಚಳಿಗಾಳಿ ಇದ್ದ ಕಾರಣ ಇಳುವರಿಯಲ್ಲಿ ಕುಸಿತ ಕಂಡಿದೆ.

16 ಸಾವಿರ ಹೆಕ್ಟೇರ್‌ನಲ್ಲಿದೆ ನಿಂಬೆ

ರಾಜ್ಯದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ನಿಂಬೆಯನ್ನು ವಿಪಚಾರಿಕವಾಗಿ ಬೆಳೆಸುವರು. ಆದರೆ, ವಿಜಯಪುರ ಜಿಲ್ಲೆ ನಿಂಬೆ ನಾಡು ಎಂದೇ ಪ್ರಸಿದ್ಧಿ ಪಡೆದಿದೆ. ಈ ಕಾರಣದಿಂದಾಗಿ ಜಿಲ್ಲೆಯೊಂದರಲ್ಲೇ 16,000 ಹೆಕ್ಟೇರ್ ಪ್ರದೇಶದಲ್ಲಿ ನಿಂಬೆ ಬೆಳೆಯಲಾಗಿದೆ. ಇದರಲ್ಲಿ ಇಂಡಿ, ಸಿಂದಗಿ ಹಾಗೂ ನಾಗಠಾಣ ಭಾಗದಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ. ಬೆಳೆಗಾರರ ಪಾಲಿಗೆ ಎಟಿಎಂ ಆಗಿರುವ ನಿಂಬೆ ಧಾರಣೆ ಎರಡು ವರ್ಷಗಳ ಕೊರೋನಾ ಸಂಕಷ್ಟದಲ್ಲಿ ತೀವ್ರ ಕುಸಿತ ಕಂಡು ಬೆಳೆಗಾರರು ಕಂಗಾಲಾಗಿದ್ದರು.

ಲಾಕ್‌ಡೌನ್ ಬಳಿಕ ಚೇತರಿಕೆ

ಕಳೆದ ವರ್ಷದ ಲಾಕ್‌ಡೌನ್‌ನಲ್ಲಿ ನಿಂಬೆ ಚೀಲವೊಂದರ ಬೆಲೆ 200, 300 ರೂ.ಗೆ ಕುಸಿತವಾಗಿ ನಿಂಬೆ ಬೆಳೆಗಾರ ತೀವ್ರ ಕಂಗಾಲಾಗಿದ್ದರು. ಸದ್ಯ ಮಾರುಕಟ್ಟೆಯಲ್ಲಿ ನಿಂಬೆಗೆ ಭರಪೂರ ಬೆಲೆ ಬಂದರೂ ಇಳುವರಿ ಇಲ್ಲದಿರುವುದರಿಂದ ಬೆಳೆಗಾರ ಮರುಗುತ್ತಿದ್ದಾನೆ. ನಿಂಬೆಗೆ ಬೆಲೆ ಇದ್ದಾಗ, ಇಳುವರಿ ಇಲ್ಲ, ಇಳುವರಿ ಇದ್ದಾಗ ಬೆಲೆ ಇರುವುದಿಲ್ಲ. ನಮ್ಮಂತಹ ನಿಂಬೆ ಬೆಳೆಗಾರರ ಪರಿಸ್ಥಿತಿ ಯಾವತ್ತೂ ಆಯೋಮ ಯವಾಗಿರುತ್ತದೆ. ಮಾರುಕಟ್ಟೆ ದರದೊಂದಿಗೆ, ಪ್ರಕೃತಿಯು ಕೂಡ ನಿಂಬೆ ಬೆಳೆಗಾರರ ಜೊತೆ ಚೆಲ್ಲಾಟವಾಡುತ್ತದೆ ಎಂದು ರಾಜು ಹಿಪ್ಪರಗಿ ಅಳಲು ತೋಡಿಕೊಳ್ಳುತ್ತಾರೆ.

ವಿಶ್ವಕ್ಕೀಗ ಬೆಳಕಾಗುವುದು ಭಾರತೀಯ ಕಾಫಿಯೊಂದಿಗೆ!

ಕಾಫಿ ರಫ್ತು ಶೇ.42 ಹೆಚ್ಚಳ

ಹೊಸದಿಲ್ಲಿ: ಹೌದು, ಈಗ ವಿಶ್ವಕ್ಕೆ ಬೆಳಗಾಗುವುದು ಭಾರತೀಯ ಕಾಫಿಯೊಂದಿಗೇ! ವಿಶ್ವದಲ್ಲಿ ಭಾರತೀಯ ಕಾಫಿ ಬಳಕೆ ಹೆಚ್ಚುತ್ತಿದ್ದು, 2021-22ನೇ ಸಾಲಿನಲ್ಲಿ ಕಾಫಿ ರಫ್ತಿನಲ್ಲಿ ಶೇ.42ರಷ್ಟು ಹೆಚ್ಚಳ ದಾಖಲಾಗಿದೆ.ಈ ಮೂಲಕ ಭಾರತೀಯ ಕಾಫಿ ಬೆಳೆಗಾರರು ಮತ್ತು ರಫ್ತುದಾರರು ಶತಕೋಟಿ ಡಾಲರ್ ಗಳಿಕೆ ಮಾಡಿ ಹೊಸ ದಾಖಲೆ ಬರೆದಿದ್ದಾರೆ.

ಇದು ಭಾರತೀಯ ಕಾಫಿ ಉದ್ಯಮರಂಗಕ್ಕೆ ಚೇತೋಹಾರಿ ಭರವಸೆಯನ್ನು ತಂದುಕೊಟ್ಟಿದೆ. 2011-12ರಿಂದ 2020-21ರ ನಡುವೆ ಭಾರತೀಯ ಕಾಫಿ ರಫ್ತಿನಲ್ಲಿ ವಾರ್ಷಿಕವಾಗಿ ಶೇ.3ರಷ್ಟು ಇಳಿಕೆ ಕಂಡುಬಂದಿದ್ದು ಕಳವಳಕ್ಕೆ ಕಾರಣವಾಗಿತ್ತು .ಆದರೆ 2021-22ನೇ ಸಾಲಿನಲ್ಲಿ ಕಾಫಿ ರಫ್ತಿನಲ್ಲಿ ಶೇ.42ರಷ್ಟು ಏರಿಕೆಯಾಗಿರುವುದನ್ನು ಹರ್ಷದಿಂದ ಉಲ್ಲೇಖಿಸಿರುವ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಅವರು, ಕಾಫಿ ಬೆಳೆಗಾರರು ಮತ್ತು ರಫ್ತುದಾರರು ಈ ಮೂಲಕ ಒಂದು ಶತಕೋಟಿ ಡಾಲರ್‌ಗಳಿಗೂ ಅಧಿಕ ಆದಾಯ ಗಳಿಸಿ ಹೊಸ ಇತಿಹಾಸ ನಿರ್ಮಿಸಿದ್ದಾರೆ ಎಂದರು. ಈ ಬಗ್ಗೆ ಅವರು ಕೂ ಆ್ಯಪ್‌ನಲ್ಲಿ ಬರೆದುಕೊಂಡಿದ್ದಾರೆ.

ಜಗತ್ತು ಈಗ ಬೆಳಗ್ಗೆ ಏಳುವುದು ಭಾರತೀಯ ಕಾಫಿಯೊಂದಿಗೆ ಎಂದು ಅವರು ಉದ್ಗರಿಸಿದ್ದಾರೆ. 2020-21ನೇ ಸಾಲಿನಲ್ಲಿ 720ದಶಲಕ್ಷ ಡಾಲರ್ ಮೌಲ್ಯದ ಕಾಫಿಯನ್ನು ಭಾರತ ರಫ್ತು ಮಾಡಿದೆ. ಇದರಲ್ಲಿ ರೊಬಸ್ಟಾ ಕಾಫಿ ಬೀಜದ ಪ್ರಮಾಣ ಶೇ.42ರಷ್ಟಿದೆ. 2019-20ನೇ ಸಾಲಿನಲ್ಲಿ ಕೋವಿಡ್ ಕಾರಣದಿಂದಾಗಿ ಡಾಲರ್ ಮೌಲ್ಯದಲ್ಲಿ ಒಟ್ಟಾರೆ ಕಾಫಿ ರಫ್ತು 9ವರ್ಷಗಳಲ್ಲೇ ಅತ್ಯಂತ ಕನಿಷ್ಠ ಮಟ್ಟಕ್ಕೆ ಕುಸಿದಿತ್ತು.



2021ರಲ್ಲಿ ಶೇ. 28 ಏರಿಕೆ

ಮನಿ ಕಂಟ್ರೋಲ್ ವರದಿ ಪ್ರಕಾರ, 2021ರಲ್ಲಿ ಭಾರತೀಯ ಕಾಫಿಯ ರಫ್ತು ಶೇ.28ರಷ್ಟು ಏರಿಕೆಯಾಗಿದೆ. ವರ್ಷದ ಮಧ್ಯಭಾಗದ ಬಳಿಕ ಕಾಫಿ ಸೇವನೆ-ಬಳಕೆಯ ದೊಡ್ಡ ದೇಶಗಳಲ್ಲಿ ಕಾಫಿ ಬೇಡಿಕೆಯಲ್ಲಿ ಪುನಶ್ಚೇತನ ಉಂಟಾಗಿದ್ದು ಇದಕ್ಕೆ ಕಾರಣವಾಗಿದೆ.ಕಾಫಿ ಮಂಡಳಿಯ ಅಂಕ-ಅಂಶಗಳ ಪ್ರಕಾರ , ಈ ವರ್ಷ 395,716ಟನ್ ಕಾಫಿ ರಫ್ತಾಗಿದ್ದು, 950ದಶಲಕ್ಷ ಡಾಲರ್ ಆದಾಯ ಗಳಿಕೆಯಾಗಿದೆ. ಇದು ಕಳೆದೊಂದು ದಶಕದಲ್ಲೇ ಅತ್ಯಧಿಕ ಗಳಿಕೆ ಮೊತ್ತವಾಗಿದೆ.2020ರಲ್ಲಿ ಭಾರತವು 714ದಶಲಕ್ಷ ಡಾಲರ್ ಮೌಲ್ಯದ 308,050ಟನ್ ಕಾಫಿ ರಫ್ತು ಮಾಡಿತ್ತು .ಈ ಪ್ರವೃತ್ತಿ 2021ನೇ ವರ್ಷದ ಮೊದಲಾರ್ಧದವರೆಗೂ ಮುಂದುವರಿದಿತ್ತು .ಆದರೆ ಅನಂತರ ಕಾಫಿ ರಫ್ತಿನಲ್ಲಿ ಚೇತರಿಕೆಯಾಗಿದೆ.

06-04-2022 Hd Pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in

ಕಾಸರಗೋಡಿನ 'ಜೆನ್‌ಕೋಕಸ್' ಉತ್ಪನ್ನಕ್ಕೆ ಹೊರರಾಜ್ಯಗಳಲ್ಲೂ ಬೇಡಿಕೆ

ತೆಂಗು ಹಾಲಿನ ಎಣ್ಣೆ ತಯಾರಿಸಿ ಗೆದ್ದ ಪಾವನಾ ಮಹೇಶ್

INDUS 555-D TMT Presents
ರೈತ ರತ್ನ ಪ್ರಶಸ್ತಿ Season 2
Co Presented by ಅಗ್ರಿಮೇಟ್
asianet ಸುವರ್ಣ ನ್ಯೂಸ್
ಕನ್ನಡಪ್ರಭ
Special Partner
ಸದ್ಗುರು ಆಯುರ್ವೇದ
Powered by
VSTAAR NONI JUICE

ಕನ್ನಡ ಪ್ರಭ–ಸುವರ್ಣ ನ್ಯೂಸ್ ಪ್ರದಾನ ಮಾಡುವ ರೈತರತ್ನ 2022 ಪ್ರಶಸ್ತಿ ಕಾಸರಗೋಡಿನ ಪಾವನಾ ಮಹೇಶ್ ಭಟ್ ಅವರಿಗೆ ಸಂದಿದೆ. ಸಾಧಕಿಗೆ ಗೌರವ ಸಮರ್ಪಣೆ.







• ಚಿತ್ರಾ ಸಿ.ಆರ್.

ಕಲಬೆರಕೆ ಇಲ್ಲದ, ತೆಂಗಿನ ಹಾಲಿನಿಂದ ಎಣ್ಣೆ ಉತ್ಪಾದಿಸಿ ಅದಕ್ಕೆ ಉತ್ತಮ ಮಾರುಕಟ್ಟೆಯನ್ನು ಕಂಡುಕೊಂಡವರು ಕಾಸರಗೋಡಿನ ಪಾವನಾ ಮಹೇಶ್ ಭಟ್. 'ಜೆನ್‌ಕೋಕಸ್' ಎಂಬ ತೆಂಗಿನ ಎಣ್ಣೆ ಆರೋಗ್ಯವರ್ಧಕ, ಸೌಂದರ್ಯವರ್ಧಕ ಗುಣಗಳನ್ನು ಹೊಂದಿದ್ದು, ಪರಿಶುದ್ಧ ಉತ್ಪನ್ನವಾಗಿ ಜನಪ್ರಿಯವಾಗಿದೆ. ಬಲಿತ ಹಸಿ ತೆಂಗಿನಕಾಯಿಯ ಹಾಲಿನಿಂದ ಉತ್ಪಾದಿಸುವ ಈ ಎಣ್ಣೆ ಯಾವುದೇ ಕಲಬೆರಕೆ ಇಲ್ಲದ ರಾಸಾಯನಿಕ ಮುಕ್ತವಾಗಿರುವ ದೇಸಿ ಉತ್ಪನ್ನವಾಗಿ ಬೇಡಿಕೆ ಕಂಡುಕೊಂಡಿದೆ.

ಐಟಿ ಕಂಪನಿಯ ಉದ್ಯೋಗಿಯನ್ನು ಮದುವೆಯಾಗಿ, ಇಬ್ಬರು ಮಕ್ಕಳಿರುವ ಪಾವನಾ ಮಹೇಶ್ ಭಟ್ 2014ರಲ್ಲಿ ಮಾಡಿದ ಒಂದು ದೃಢ ನಿರ್ಧಾರ ಇಂದು ಅವರನ್ನು ಓರ್ವ ಸ್ವಾವಲಂಬಿಯನ್ನಾಗಿ ಮಾಡಿದೆ. ಪದವೀಧರೆ ಆಗಿರುವ ಇವರು 15 ವರ್ಷಗಳ ಕಾಲ ಮಂಗಳೂರಿನ ಐಟಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ಪತಿಯೊಂದಿಗೆ ನೆಲೆಸಿದ್ದರು. ಊರಿಗೆ ಹೋಗಿ ಅಲ್ಲೇ ಸ್ಥಳೀಯವಾಗಿ ಸ್ವಂತ ಉದ್ಯಮ ಮಾಡಬೇಕು, ಇದರಿಂದ ಸ್ಥಳೀಯ ರೈತರಿಗೂ ಅನುಕೂಲವಾಗಬೇಕೆಂಬ ಕನಸು ಗಟ್ಟಿಯಾದದ್ದೇ ಊರಿಗೆ ಮರಳಿದರು. ಕೇರಳ ರಾಜ್ಯಕ್ಕೆ ಸೇರುವ ಗಡಿನಾಡು ಕಾಸರಗೋಡಿನ ನಾಯ್ಕಾಪು ಸಮೀಪದ ನಾರಾಯಣಮಂಗಲದಲ್ಲಿ 2014ರಲ್ಲಿ 'ಶ್ರೀಕಲ್ಪ ಇಂಡಸ್ಟ್ರೀಸ್' ಆರಂಭವಾಯಿತು. ಪಿಎಂಇಜಿಪಿ ಹಾಗೂ ಖಾದಿ ಗ್ರಾಮ ಉದ್ಯೋಗದ ಸಹಕಾರದೊಂದಿಗೆ 25 ಲಕ್ಷ ರು. ಬಂಡವಾಳದಲ್ಲಿ ಶುರುವಾದ ಉದ್ಯಮವಿದು. ಇಲ್ಲಿ ತಯಾರಾಗುವ ವರ್ಜಿನ್ ತೆಂಗಿನ ಎಣ್ಣೆ, ಸಸ್ಯ ಮೂಲದ ಕೂದಲಿನ ಎಣ್ಣೆ, ನೋವಿನ ಎಣ್ಣೆ ಹಾಗೂ ತೆಂಗಿನಕಾಯಿ ನೀರಿನಿಂದ ತಯಾರಿಸಿದ ವಿನೆಗರ್ ಇತ್ಯಾದಿ ಉತ್ಪನ್ನಗಳು 'ಜೆನ್ ಕೋಕಸ್' ಎಂಬ ಬ್ರಾಂಡ್‌ನಲ್ಲಿ ಗುರುತಿಸಿಕೊಂಡಿದೆ. ಪರಿಶುದ್ಧವಾದ ಈ ತೆಂಗಿನ ಎಣ್ಣೆಯ ದರ 1 ಲೀಟರ್‌ಗೆ ಸಾವಿರ ರುಪಾಯಿಯಷ್ಟು ಇದೆ.

ಏನಿದು ವರ್ಜಿನ್ ತೆಂಗಿನ ಎಣ್ಣೆ?

ಸಾಮಾನ್ಯವಾಗಿ ತೆಂಗಿನ ಎಣ್ಣೆಯನ್ನು ಒಣಕೊಬ್ಬರಿಯಿಂದ ತಯಾರಿಸುತ್ತಾರೆ. ಆದರೆ ಇವರು ತೆಂಗಿನಕಾಯಿಯಿಂದ ಎಣ್ಣೆ ತಯಾರಿಸುತ್ತಾರೆ. ಬೆಳೆದ ಹಸಿ ತೆಂಗಿನಕಾಯಿಗಳನ್ನು ಸ್ಥಳೀಯ ರೈತರಿಂದ ಖರೀದಿಸಿ ಅದರ ಗೆರಟೆ ಬೇರ್ಪಡಿಸಿ ತೆಂಗಿನಕಾಯಿಯ ಮೇಲಿನ ತೆಳುವಾದ ಸಿಪ್ಪೆ ತೆಗೆದು, ಸಣ್ಣ ತುಂಡುಗಳನ್ನಾಗಿ ಮಾಡಿ ಹಾಲು ಹಿಂಡಿ, ಉಗಿಯಲ್ಲಿ ಕುದಿಸಿ ಆತ್ಯಾಧುನಿಕ ಉಪಕರಣಗಳ ಮೂಲಕ ತೆಂಗಿನ ಎಣ್ಣೆ ಉತ್ಪಾದಿಸುತ್ತಾರೆ. ಈ ತೆಂಗಿನ ಎಣ್ಣೆಯಲ್ಲಿ ರೋಗನಿರೋಧಕ ಶಕ್ತಿಯಿದ್ದು, ತಾಯಿಯ ಹಾಲಿಗೆ ಸಮಾನವಾದ ಲುರಿಕ್ ಆ್ಯಸಿಡ್ ಹೇರಳವಾಗಿ ಹೊಂದಿದೆ. ವಿಟಮಿನ್ ಇ ಜೀವಸತ್ವ ಹೊಂದಿದೆ. ಈ ತೆಂಗಿನ ಎಣ್ಣೆಯನ್ನು ವೈದ್ಯಕೀಯ ಮತ್ತು ಖಾದ್ಯ ತೈಲವಾಗಿ ಬಳಸಬಹುದು. ಕೂದಲಿನ ಆರೋಗ್ಯಕ್ಕೆ, ಶರೀರದ ಮಸಾಜ್‌ಗೆ, ಸೂರ್ಯನ ಕಿರಣಗಳಿಂದ ರಕ್ಷಣೆ ಪಡೆಯಲು, ಎಳೆಯ ಮಕ್ಕಳ ಚರ್ಮದ ಆರೈಕೆಗೆ, ಚರ್ಮ ರೋಗ ನಿವಾರಣೆಗೆ ಕೂಡ ಬಳಸಲಾಗುತ್ತದೆ.

ಜೆನ್‌ಕೋಕಸ್ ವರ್ಜಿನ್ ಆಯಿಲ್‌ಗೆ ಕರ್ನಾಟಕ ಮಾತ್ರವಲ್ಲದೆ ಕೇರಳ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಉತ್ತಮ ಬೇಡಿಕೆ ಇದೆ. ಈ ಎಣ್ಣೆಯ ಪರಿಮಳ ದೀರ್ಘಕಾಲದವರೆಗೆ ಇರುವುದು ಕೂಡ ಬೇಡಿಕೆ ಹೆಚ್ಚಲು ಕಾರಣ. ಸ್ಥಳೀಯ ರೈತರಿಂದ ಬಲಿತ ತೆಂಗಿನಕಾಯಿಯನ್ನು ಖರೀದಿ ಮಾಡುವುದರಿಂದ ಪರಿಸರದ ರೈತರ ಆದಾಯಕ್ಕೂ ಅನುಕೂಲವಾಗಿದೆ. ದಿನಕ್ಕೆ 100 ಕೆಜಿ ತೆಂಗಿನಕಾಯಿಯನ್ನು ಉಪಯೋಗಿಸಿ 10 ಲೀಟರ್‌ನಷ್ಟು ತೆಂಗಿನ ಎಣ್ಣೆಯನ್ನು ಉತ್ಪಾದಿಸುತ್ತಾರೆ. ಪಾವನಾ ಅವರು ಉತ್ಪಾದನಾ ವ್ಯವಸ್ಥೆಯನ್ನು ನೋಡಿಕೊಂಡರೆ, ಪತಿ ಮಹೇಶ್ ಮಾರ್ಕೆಟಿಂಗ್ ವ್ಯವಹಾರದ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

ಸಂಪರ್ಕ ಸಂಖ್ಯೆ: 8086958396

06 ಏಪ್ರಿಲ್ 2022 ಬುಧವಾರ

ಸಂಯುಕ್ತ ಕರ್ನಾಟಕ

ಕೃಷಿ ವಾಣಿಜ್ಯ

skeditorkv@gmail.com



ರೈತರಿಗೆ ಇಸ್ರೇಲ್ ತಂತ್ರಜ್ಞಾನ ನೆರವು ಸಿಗಲಿ

ಇತ್ತೀಚೆಗೆ ದೇಶಾದ್ಯಂತ ಇಸ್ರೇಲ್ ಕೃಷಿ ತಂತ್ರಜ್ಞಾನ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಪ್ರಸ್ತುತ ಇಸ್ರೇಲ್‌ದಲ್ಲಿ ಬರಡು ಭೂಮಿಯಲ್ಲಿ ಹಣ್ಣು, ತರಕಾರಿ, ಆಹಾರ ಧಾನ್ಯಗಳನ್ನು ಬೆಳೆದು ಅಧಿಕ ಪ್ರಮಾಣದ ಇಳುವರಿ ಪಡೆಯಲಾಗಿದೆ. ಹೀಗಾಗಿ ಇದು ಇಸ್ರೇಲ್ ಮಾದರಿ ಕೃಷಿ ಪದ್ಧತಿ ಎಂದೇ ಜಗತ್ತಿನಾದ್ಯಂತ ಜನಜನಿತವಾಗಿದೆ.

ಹೀಗಾಗಿ ಭಾರತೀಯ ಕೃಷಿ ಪದ್ಧತಿಗೆ ಹೊಂದಿಕೊಳ್ಳುವಂತೆ ಇದನ್ನು ಅಳವಡಿಸಿಕೊಳ್ಳಲು ರೈತರಿಗೆ ಸಹಾಯ ಧನದ ಅಗತ್ಯವಿದೆ. ಬೋಡಗಳ ರೀತಿ ಕೃಷಿ ಭೂಮಿ ಸಮತಟ್ಟಾಗಿ ಮಾಡಿ ಅದರಲ್ಲಿ ಹನಿ ನೀರಾವರಿ ಪೈಪ್‌ಗಳನ್ನು ಅಳವಡಿಸಿ ಮೇಲೆ ಪ್ಲಾಸ್ಟಿಕ್ ಪೇಪರ್ ಹೊದಿಕೆ ಹಾಕಬೇಕು. ನಂತರ ಬೆಳೆಗಳ ಬೀಜ ಬಿತ್ತನೆ ಮಾಡಿದಾಗ ಕಡಿಮೆ ನೀರಿನಲ್ಲಿ ಉತ್ತಮ ತೇವಾಂಶ ಕಾಯ್ದುಕೊಂಡು ಅಧಿಕ ಇಳುವರಿ ಬರುತ್ತದೆ. ಇದರಿಂದ ತಪ್ಪಲು ಪಲ್ಯೆ, ತರಕಾರಿ ಮತ್ತು ದವಸ ಧಾನ್ಯಗಳನ್ನು ಹೆಚ್ಚು ಹೆಚ್ಚು ಬೆಳೆಯಬಹುದು. ಈ ಪದ್ಧತಿ ನೀರಿನ ಕೊರತೆಯ ಪ್ರದೇಶಕ್ಕೆ ಅನುಕೂಲಕರವಾಗಿರುತ್ತದೆ. ಮತ್ತು ಬೆಳೆಯು ಮಣ್ಣಿಗೆ ಹತ್ತಿ ಕೊಳೆಯುವದನ್ನು ತಪ್ಪಿಸಬಹುದು.ಹಸಿರು ಮನೆ ನಿರ್ಮಿಸಿ ತೇವಾಂಶಭರಿತವಾಗುವಂತೆ ಮಾಡಿ ಹೊದಿಕೆ ಹಾಕುವದರಿಂದ ತೋಟಗಾರಿಕೆ ಸಸ್ಯ, ತರಕಾರಿ ಮತ್ತು ಹೂಗಳನ್ನು ಹೆಚ್ಚು ಬೆಳೆಯಬಹುದು. ಕಡಿಮೆ ಪ್ರದೇಶದಲ್ಲಿ ಹೆಚ್ಚು ಇಳುವರಿ ಮತ್ತು ಉತ್ಪಾದನೆ ಪಡೆಯಬಹುದು.

■ ಶರೀಫ ಗಂ ಚಿಗಳ್ಳಿ, ಬೆಳಗಲಿ
ತಾ. ಹುಬ್ಬಳ್ಳಿ ಜೆ.ಧಾರವಾಡ



ಹಂದರ ಬೇಸಾಯ

ಬಳ್ಳಿ ಮತ್ತು ಹೆಚ್ಚು ರೆಂಬೆ ಬಿಡುವ ಕೃಷಿ ಬೆಳೆಗೆ ಆಸರೆಯಾಗಿ ಹಂದರವನ್ನು ಹಾಕುವದರಿಂದ ಇಳುವರಿ ಅಧಿಕವಾಗಿರುತ್ತದೆ. ಟೊಮಾಟೊ, ಹೀರೆಕಾಯಿ, ಅವರೆ, ತಿಪ್ಪೇರಿಕಾಯಿ, ಹಾಗಲಕಾಯಿ, ಕುಂಬಳಕಾಯಿ, ಸವತೆಕಾಯಿ ಇತ್ಯಾದಿ ತರಕಾರಿ ಬೆಳೆ ಮತ್ತು ಮೆಣಸಿನಕಾಯಿ, ದ್ರಾಕ್ಷಿ, ಸ್ಟ್ರಾಬೆರಿ ಇತ್ಯಾದಿ ಹಣ್ಣುಗಳು ಸೇರಿದಂತೆ ಸೊಪ್ಪುಗಳನ್ನು ಹಂದರ ಹಾಕಿ ತಂತಿಯ ಮೇಲೆ ಬೆಳೆಯುದರಿಂದ ಹೆಚ್ಚು ಫಸಲು ಬರುತ್ತದೆ. ರೈತರು ಪ್ರತಿ ಬೆಳೆಗೆ ಹಂದರ ಮತ್ತು ಆಂತರ ಬೇಸಾಯ ಪದ್ಧತಿ ಬಳಸಬೇಕು.ಹೀಗೆ ಭಾರತದ ಬಹು ಭಾಗದಲ್ಲಿ ಇಸ್ರೇಲ್ ಮಾದರಿ ಕೃಷಿ ತಂತ್ರಜ್ಞಾನ ಬಳಸುವದರಿಂದ ಬೃಹತ್ ಪ್ರಮಾಣದಲ್ಲಿ ಕೃಷಿ ಉತ್ಪಾದನೆ ಮಾಡಿ ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸಬಹುದು.

ಸೋಲಾರ್ ಬಳಕೆ

ವಿದ್ಯುತ್ ಕೊರತೆಯು ಕೃಷಿಯಲ್ಲಿ ಭಾರೀ ಸಮಸ್ಯೆ ತಂದಿದೆ. ಮೂರು ಲೈನ್(ತ್ರಿಪೇಸ್) ವಿದ್ಯುತ್ ಕೊರತೆಯಿಂದ ಬೆಳೆಗೆ ಬೋರ್‌ವೆಲ್ ಮೂಲಕ ನೀರು ಪೂರೈಕೆಯಾಗದೆ ಒಣಗಿ ಇಳುವರಿ ಕಡಿಮೆ ಬರುತ್ತಿದೆ. ಆದ್ದರಿಂದ 7-10 ಗಂಟೆ ನೀಡುವ ವಿದ್ಯುತ್ ಕೃಷಿಗೆ ನೀರಾವರಿ ಮಾಡಿಕೊಳ್ಳಲು ಸಾಲುತ್ತಿಲ್ಲ. ಆದ್ದರಿಂದ ಇಸ್ರೇಲ್ ಮಾದರಿಯಲ್ಲಿ ಬಹು ಉಪಯೋಗಿ ಸೋಲಾರ್ ಬಳಸಿಕೊಳ್ಳಬೇಕು. ಸೋಲಾರ್ ಪ್ಲಾಂಟ್ ನಿರ್ಮಿಸಿ ವಿದ್ಯುತ್ ಪಡೆಯಬಹುದು. ಸೋಲಾರ್ ಪ್ಲಾಂಟಿನಿಂದ 24 ತಾಸು ವಿದ್ಯುತ್ ಪಡೆದು ಬಹಳಷ್ಟು ಕೃಷಿ ಭೂಮಿಯನ್ನು ನೀರಾವರಿಗೆ ಒಳಪಡಿಸಿಕೊಳ್ಳಬಹುದು. ಇದರಿಂದ ವಿದ್ಯುತ್ ಬಿಲ್ ಕಡಿಮೆ ಮಾಡಬಹುದು.